**ಐದನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ, ಶಿವಮೊಗ್ಗ**
**(ಪೀಠಾಸೀನ, ಸಾಗರ)**
**ಎಸ್.ಸಿ ನಂಃ 10001/2024**

**ಪಿರ್ಯಾದುದಾರರು** : **ಆನಂದಪುರ ಪೊಲೀಸ್ ಠಾಣೆ**

**ವಿರುದ್ಧ**

**ಆರೋಪಿ** : 1. ಹನಮಂತಪ್ಪ ಯಾನೆ ಬಿಸ್ಟಳ್ಳಿ ಹನುಮಂತಪ್ಪ
ಬಿನ್ ಪುಟ್ಟಪ್ಪ
ವಯಸ್ಸು ಸುಮಾರು 70 ವರ್ಷ
ವೃತ್ತಿಃ ವ್ಯವಸಾಯ

2. ಮಂಜುನಾಥ ಬಿನ್ ಬಿಸ್ಟಳ್ಳಿ ಹನುಮಂತಪ್ಪ
ವಯಸ್ಸು ಸುಮಾರು 47 ವರ್ಷ
ವೃತ್ತಿಃ ವ್ಯವಸಾಯ

3. ರವಿ ಬಿನ್ ಬಿಸ್ಟಳ್ಳಿ ಹನುಮಂತಪ್ಪ
ವಯಸ್ಸು ಸುಮಾರು 38 ವರ್ಷ
ವೃತ್ತಿಃ ವ್ಯವಸಾಯ

1 ರಿಂದ 3 ನೇ ಆರೋಪಿತರ ವಾಸಃ
ತಾವರೆಹಳ್ಳಿ ಗ್ರಾಮ
ಸಾಗರ ತಾಲ್ಲೂಕು, ಶಿವಮೊಗ್ಗ ಜಿಲ್ಲೆ.

## <u>ದೋಷಾರೋಪಣೆ</u>

ಪ್ರಭಾವತಿ ಜಿ., ಎಲ್.ಎಲ್.ಎಂ., 5 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ಶಿವಮೊಗ್ಗ (ಪೀಠಾಸೀನ ಸಾಗರ) ಆದ ನಾನು ಈ ಮೇಲ್ಕಂಡ ಆರೋಪಿಯಾದ ನಿಮ್ಮನ್ನು ಈ ಕೆಳಕಂಡ ಆರೋಪಗಳಿಗೆ ಗುರಿಪಡಿಸುವುದೇನೆಂದರೆ,

ಮೃತೆ ಸುಷ್ಮಾಳಿಗೆ 14 ವರ್ಷಗಳ ಹಿಂದೆ ಸಾಕ್ಷಿ 2 ರವರೊಂದಿಗೆ ಮದುವೆಯಾಗಿದ್ದು ಮದುವೆ ನಂತರ ಮೃತೆ ತನ್ನ ಗಂಡ, ಮಾವ, ಭಾವ ಮತ್ತು ಮೈದುನರೊಂದಿಗೆ ಮನೆಯಲ್ಲಿ ಎಲ್ಲರೂ ಒಟ್ಟಿಗೆ ವಾಸವಾಗಿದ್ದು ನಂತರದಲ್ಲಿ ಒಟ್ಟು ಕುಟುಂಬದಲ್ಲಿ ಭಿನ್ನಾಭಿಪ್ರಾಯಗಳು ಬಂದು ಮೃತೆ ಸುಷ್ಮಾ ಮತ್ತು ಸಾಕ್ಷಿ 2 ರವರು ತಮ್ಮ ಮನೆಯ ಹತ್ತಿರವೇ ಬೇರೆ ಮನೆ ಮಾಡಿಕೊಂಡು ವಾಸವಾಗಿದ್ದು ಆರೋಪಿತರಾದ ನಿಮ್ಮ ಪೈಕಿ 1 ನೇ ಆರೋಪಿಯ ಹೆಸರಿನಲ್ಲಿ ತಾವರೆಹಳ್ಳಿ ಗ್ರಾಮದ ಸರ್ವೆ ನಂಬರ್ 44 ರಲ್ಲಿ 2 ಎಕರೆ 10 ಗುಂಟೆ ಜಮೀನು ಇದ್ದು ಸದರಿ ಜಮೀನು ಹಿಸ್ಸೆ ಮಾಡುವ ವಿಚಾರದಲ್ಲಿ ಮೃತೆಯ ಮಾವ ಆರೋಪಿಗಳಾದ ನೀವು ಮೃತೆ ಮತ್ತು ಮೃತೆಯ ಗಂಡನೊಂದಿಗೆ ಗಲಾಟೆ ಮಾಡುತ್ತಾ ಸರಿಯಾಗಿ ಹಿಸ್ಸೆ ಮಾಡಿಕೊಡದೇ ಮೃತೆಗೆ ಅವಾಚ್ಯವಾಗಿ ಬೈಯ್ಯುತ್ತಾ ನೀನು ಸತ್ತರೆ ಎಲ್ಲಾ ಸರಿಯಾಗುತ್ತದೆ ಎಂದು ಹೇಳಿ ಹಿಂಸೆ ಮಾಡುತ್ತಿದ್ದು ಅಲ್ಲದೇ 1 ನೇ ಆರೋಪಿ ಸದರಿ ಜಮೀನನ್ನು ಅಳತೆ ಮಾಡಿಕೊಡುವಂತೆ ಆನಂದಪುರ ಗ್ರಾಮ ಪಂಚಾಯಿತಿಯ ಅಧ್ಯಕ್ಷರಿಗೆ ಅರ್ಜಿ ಸಲ್ಲಿಸಿದ್ದು ಗ್ರಾಮ ಪಂಚಾಯಿತಿಯ ಸಾಮಾಜಿಕ ನ್ಯಾಯ ಸಮಿತಿಯಲ್ಲಿ ವಿಚಾರಣೆ ಮಾಡಿ ಸಾಮಾಜಿಕ ನ್ಯಾಯ ಸಮಿತಿಯವರು ಅಳತೆ ಮಾಡಿಕೊಡುವ ಬಗ್ಗೆ ತೀರ್ಮಾನಿಸಿ ದಿನಾಂಕಃ 08-10-2021 ರಂದು ಬೆಳಿಗ್ಗೆ 7-30 ಗಂಟೆಗೆ ಗ್ರಾಮ ಪಂಚಾಯ್ತಿಯ ಸಾಮಾಜಿಕ ನ್ಯಾಯ ಸಮಿತಿಯ ಸದಸ್ಯರಾದ ಸಾಕ್ಷಿ 20 ರಿಂದ ಸಾಕ್ಷಿ 23 ರವರು ಬಂದು ಆರೋಪಿಗಳಾದ ನಿಮ್ಮ ಮತ್ತು ಮೃತೆ ಹಾಗೂ ಮೃತೆಯ ಗಂಡನ ಸಮಕ್ಷಮದಲ್ಲಿ ಜಮೀನನ್ನು ಅಳತೆ ಮಾಡಲು ಪ್ರಾರಂಭಿಸುತ್ತಿದ್ದಾಗ ಮೃತೆ ಈ ಜಮೀನನ್ನು ಅಳತೆ ಮಾಡುವುದು ಬೇಡ ಎಂದು ಹೇಳಿದ್ದು ಆಗ ಆರೋಪಿತರಾದ ನೀವು ಮೃತೆ ಸುಷ್ಮಾಳಿಗೆ ಸೂಳೆ ಮುಂಡೆ , ಬೋಳಿ ಮುಂಡೆ ಎಂದು ಅವಾಚ್ಯವಾಗಿ ಬೈದ್ದು, ಆ ಮೂಲಕ ಭಾರತ ದಂಡ ಸಂಹಿತೆ ಕಲಂಃ **504** ಸಹಕಲಂ **34** ರ ಅನ್ವಯ ನೀವು ಶಿಕ್ಷಾರ್ಹ ಅಪರಾಧ ಮಾಡಿದ್ದೀರಿ ಮತ್ತು ಇದು ನನ್ನ ಸಂಜ್ಞೆಯೊಳಗೆ ಬರುತ್ತದೆ.

2 ನೇಯದಾಗಿ ಮೇಲ್ಕಂಡ ದಿನಾಂಕ, ಸ್ಥಳ ಹಾಗೂ ಸಮಯದಲ್ಲಿ ಆರೋಪಿತರಾದ ನೀವು ಮೃತೆ ಸುಷ್ಮಾಳಿಗೆ ಸೂಳೆ ಮುಂಡೆ, ಬೋಳಿ ಮುಂಡೆ ಎಂದು ಅವಾಚ್ಯವಾಗಿ ಬೈದ್ದು ನೀನು ಮೊದಲು ಸಾಯಿ ಆಮೇಲೆ ಸರಿಯಾಗುತ್ತದೆ ಎಂದು ಹೇಳಿದ್ದರಿಂದ ಮೃತೆ ಸುಷ್ಮಾ ಮನನೊಂದು ಆರೋಪಿಗಳಾದ ನೀವು ನೀನು ಸಾಯಿ ಎಂದು ಸುಷ್ಮಾಳಿಗೆ ಪ್ರಚೋದನೆ ಮಾಡಿದ್ದರಿಂದ ಸುಷ್ಮಾಳು ತಮ್ಮ ಮನೆಯ ಒಳಗೆ ಓಡಿ ಹೋಗಿ ತನ್ನ ಸಾವಿಗೆ ಕಾರಣದ ಬಗ್ಗೆ

ಡೆತ್ ನೋಟ್ ಬರೆದು ಬೆಳಿಗ್ಗೆ 8–00 ಗಂಟೆಗೆ ವಿಷ ಸೇವನೆ ಮಾಡಿದ್ದು ಅವಳನ್ನು ಮೃತೆಯ ಗಂಡ ಸಾಕ್ಷಿ 2 ಮತ್ತು ಸಾಕ್ಷಿ 11 ರವರು ಆನಂದಪುರ ಸರ್ಕಾರಿ ಆಸ್ಪತ್ರೆಗೆ ಕರೆದುಕೊಂಡು ಬಂದು ಚಿಕಿತ್ಸೆಗೆ ಸೇರಿಸಿದ್ದು ಹೆಚ್ಚಿನ ಚಿಕಿತ್ಸೆಗೆ ಮಣಿಪಾಲ್ ಕಸ್ತೂರಬಾ ಆಸ್ಪತ್ರೆಗೆ ಸೇರಿಸಿದ್ದರೂ ಚಿಕಿತ್ಸೆ ಫಲಕಾರಿಯಾಗದೇ ದಿನಾಂಕಃ 09–10–2021 ರಂದು ರಾತ್ರಿ 7–05 ಗಂಟೆಗೆ ಮೃತಪಟ್ಟಿದ್ದು ಸುಷ್ಮಾರವರು ಆರೋಪಿಗಳಾದ ನೀವು ಸುಷ್ಮಾಳಿಗೆ ಸಾಯುವಂತೆ ಪ್ರಚೋದನೆ ನೀಡಿದ್ದರಿಂದ ವಿಷ ಸೇವಿಸಿ ಮೃತಪಟ್ಟಿದ್ದು, ಆ ಮೂಲಕ ಭಾರತ ದಂಡ ಸಂಹಿತೆ ಕಲಂಃ **306** ಸಹಕಲಂ **34** ರ ಅನ್ವಯ ನೀವು ಶಿಕ್ಷಾರ್ಹ ಅಪರಾಧ ಮಾಡಿದ್ದೀರಿ ಮತ್ತು ಇದು ನನ್ನ ಸಂಜ್ಞೆಯೊಳಗೆ ಬರುತ್ತದೆ.

ಆದ್ದರಿಂದ ಸದರಿ ಆರೋಪಿತರಾದ ನೀವು ಈ ನ್ಯಾಯಾಲಯದಿಂದ ವಿಚಾರಣೆಗೆ ಗುರಿಯಾಗತಕ್ಕದೆಂದು ನಾನು ಈ ಮೂಲಕ ನಿರ್ದೇಶಿಸುತ್ತೇನೆ.

ದಿನಾಂಕಃ **9** ನೇ ಜನವರಿ ಮಾಹೆ, **2025** ನೇ ಇಸವಿ.

(ಪ್ರಭಾವತಿ ಜಿ)
ಐದನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ಶಿವಮೊಗ್ಗ, ಪೀಠಾಸೀನ (ಸಾಗರ).